# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು

## ಸಿ.ಸಿ. ನಂ. 597/2023

**ಸಿ.ಡಬ್ಲ್ಯೂ:2**
**ಪಿ.ಡಬ್ಲ್ಯೂ:2**

ದಿಃ **18.03.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | : ಲತಾ |
| ತಂದೆ ಹೆಸರು | : ನವೀನ್ ಕುಮಾರ್ |
| ವಯಸ್ಸು | : **32** ವರ್ಷ |
| ಉದ್ಯೋಗ | : ಸರ್ಕಾರಿ ನೌಕರರು |
| ವಾಸ ಸ್ಥಳ | : ತಿಪಟೂರು |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-1 ನನಗೆ ಪರಿಚಯ, ಚಾಸಾ-3 ನನ್ನ ತಾಯಿ. ಚಾಸಾ-1 ರವರು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದು. ದಿಃ 21-02-2023 ರಂದು ಅವರು ಕುಟುಂಬದೊಂದಿಗೆ ಮನೆಗೆ ಬೀಗ ಹಾಕಿಕೊಂಡು ಬೆಂಗಳೂರಿಗೆ ಹೋಗಿದ್ದರು. ದಿಃ 22-02-2023 ರಂದು ಬೆಳಗ್ಗೆ 6-00 ಗಂಟೆ ಸಮಯದಲ್ಲಿ ನಾನು ಚಾಸಾ-1 ರವರಿಗೆ ಕರೆ ಮಾಡಿ ನಿಮ್ಮ ಮನೆಯ ಮುಂದಿನ ಬಾಗಿಲು ಹೊಡೆದಿದೆ ಕಳ್ಳತನ ಆಗಿದೆ ಎಂದು ತಿಳಿಸಿದೆನು. ನಾನು ನೋಡಿದಾಗ ಕದಗಳು ಮೀಟಿ ತೆರೆಯಲಾಗಿತ್ತು. ನಾನು ಮತ್ತು ನಮ್ಮ ಪಕ್ಕದ ಮನೆಯವರು ಚಾಸಾ-1 ರವರು ಬಂದ ನಂತರ ಅವರ ಜೊತೆ ಹೋಗಿ ಒಳಗೆ ನೋಡಿದಾಗ ಖಾರದ ಪುಡಿ ಚೆಲ್ಲಿತ್ತು ಮತ್ತು ಬೀರುಗಳ ಬಾಗಿಲು ಮುರಿದಿತ್ತು ಮತ್ತು ಅದರೊಳಗಿದ್ದ ಚಿನ್ನದ ವಸ್ತುಗಳು ಮತ್ತು ಪೂಜೆಗೆ ಇಟ್ಟ ಬೆಳ್ಳಿ ವಸ್ತುಗಳು ಕಳ್ಳತನವಾಗಿದ್ದವು. ನಂತರ ಚಾಸಾ-1 ರವರು ನನ್ನ ಎದುರು ಪೊಲೀಸರಿಗೆ ಫೋನ್

ಮಾಡಿ ತಿಳಿಸಿದರು. ನಂತರ ಪೊಲೀಸರು ಬಂದು ಮಹಜರ್ ಮಾಡಿಕೊಂಡು ಹೋದರು. ಮೂ.ಮಾ1 ಅಮಾನತ್ತು ಪಡಿಸಿಕೊಂಡಿದ್ದರು.

ನಂತರ ಒಂದು ದಿನ ಪೊಲೀಸರು ಕಳ್ಳತನ ಮಾಡಿದ ವ್ಯಕ್ತಿಯಹುನ್ನು ಅಲ್ಲಿಗೆ ಕರೆದುಕೊಂಡು ಬಂದಿದ್ದರು ಆತನ ಹೆಸರು ಶ್ರೀನಿವಾಸ್ ಎಂದು ನಮಗೆ ತಿಳಿಸಿದರು. ಪೊಲೀಸರ ಮುಂದೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ. ಸದರಿ ಕಳ್ಳತನ ಮಾಡಿದ ವ್ಯಕ್ತಿ ಶ್ರೀನಿವಾಸ್ ರವರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಸಿ.ವಿ ವಕೀಲರು ನುಡಿದಿರುತ್ತಾರೆ. ಚಾಸಾ-1 ರವರು ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ.ವಿ ವಕೀಲರಿಂದಃ-

ನಾನು ಸಿಡಿಪಿಒ ಕಛೇರಿಯಲ್ಲಿ ಕೋ ಆರ್ಡಿನೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಸುಮಾರು 5 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಮನೆಗೆ ಸಂಬಂಧಪಟ್ಟಂತಹ ದಾಖಲೆಗಳನ್ನು ಪೊಲೀಸರು ನಮ್ಮಿಂದ ಪಡೆದುಕೊಂಡಿಲ್ಲ. ಚಾಸಾ-1 ರವರಿಗೆ ಬಾಡಿಗೆಗೆ ಮನೆ ಕೊಟ್ಟ ಬಗ್ಗೆ ದಾಖಲೆ ಸಹ ನಮ್ಮಿಂದ ಪಡೆದಿಲ್ಲ. ನಮ್ಮ ಮತ್ತು ಚಾಸಾ-1 ರವರ ನಡುವೆ ಬಾಡಿಗೆ ಕರಾರು ಪತ್ರ ಆಗಿರುವುದಿಲ್ಲ. ನಾನು ಚಾಸಾ-1 ರವರಿಗೆ ಫೋನ್ ಮಾಡಿ ತಿಳಿಸಿದ್ದೆ ಎಂದು ಹೇಳಿದ್ದು ಪೊಲೀಸರಿಗೆ ವಿಷಯ ತಿಳಿಸಿಲ್ಲ. ಚಾಸಾ-1 ರವರು ಬರುವ ಮೊದಲು ಯಾವ ಪೊಲೀಸರು ಸಹ ಅಲ್ಲಿಗೆ ಬಂದಿರಲಿಲ್ಲ. ಚಾಸಾ-1 ರವರು ಸುಮಾರು 11-30 ಗಂಟೆ ಸಮಯದಲ್ಲಿ ಪೊಲೀಸರಿಗೆ ಫೋನ್ ಮಾಡಿದ್ದರು. ಪೊಲೀಸರು ಯಾವ ಸಮಯಕ್ಕೆ ಬಂದರು ಎಂದು ಹೇಳಲು ಆಗುವುದಿಲ್ಲ. ಸುಮಾರು 1 ಗಂಟೆ ನಂತರ ಬಂದಿರಬಹುದು. ಪೊಲೀಸರು ಒಟ್ಟು 3-4 ಜನ ಜೀಪ್ ನಲ್ಲಿ ಬಂದಿದ್ದರು. ಎಲ್ಲಾ ಪರಿಶೀಲನೆ ಮಾಡಿದ್ದರು. ಬೆರಳಚ್ಚು ತಜ್ಞರು ಮತ್ತು ಡಾಗ್ ಸ್ಕ್ವಾಡ್ ಬಂದಿದ್ದರೋ

ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಮಹಜರ್ ಮಾಡುವ ದಿನದಂದು ಮನೆ ಬಳಿ ಕೊಟ್ಟಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ಅದರಂತೆ ಪ್ರದೀಪ್ ರವರ ಮನೆಯ ಬಳಿ ಬಂದು ನೋಡಿದಾಗ ಮನೆಯ ಒಳಗೆ ರೂಮ್ ನ ಬೀರುವಿನಲ್ಲಿದ್ದ ಚಿನ್ನದ ವಡವೆಗಳು ಹಾಗೂ ದೇವರ ಮನೆಯಲ್ಲಿದ್ದ ಬೆಳ್ಳಿ ಸಾಮಾನುಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವುದು ನನಗೆ ತಿಳಿಯಿತು ಎಂದು ನಾನು ಹೇಳಿಕೆ ನೀಡಿರುತ್ತೇನೆ. ಸಾಮಾನ್ಯವಾಗಿ ಚಿನ್ನದ ವಸ್ತುಗಳು ಕಾಣುವ ರೀತಿಯಲ್ಲಿ ಯಾರೂ ಸಹ ಇಡುವುದಿಲ್ಲ ಎಂದರೆ ನಿಜ. ಚಾಸಾ-1 ರವರ ಮನೆಯಲ್ಲಿ ಬೀರುಳಿನಲ್ಲಿ ಚಿನ್ನದ ವಸ್ತುಗಳು ಯಾವು ಯಾವು ಕಳ್ಳತನವಾಗಿದ್ದವು ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ಆ ದಿನ ನಾನು ಹೇಳಿದಂತೆ ಚಾಸಾ-1 ರವರ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಮತ್ತು ಬಾಗಿಲು ಮತ್ತು ಬೀರು ಮುರಿದಿರಲಿಲ್ಲ ಮತ್ತು ನಾನು ಈ ವಿಚಾರವಾಗಿಚಾಸಾ-1 ರವರಿಗೆ ಫೋನ್ ಮಾಡಿ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಪೊಲೀಸ್ ಠಾಣೆಗೆ ಹೋಗಿ ಯಾವುದೇ ದೂರು ಕೊಟ್ಟಿಲ್ಲ ಮತ್ತು ಪೊಲೀಸರು ಸ್ಥಳಕ್ಕೆ ಬಂದಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೂ.ಮಾ1 ಸ್ಥಳದಿಂದ ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಖಾರದ ಪುಡಿ ಚೆಲ್ಲಿದ್ದರು ಎಂದು ಇದೇ ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಮೂ.ಮಾ1 ನ್ನು ನಾನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೂ.ಮಾ1 ರ ಮೇಲೆ ಯಾವುದೇ ವಿಶೇಷ ಗುರುತು ಇಟ್ಟಿಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.